**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೊಂದನೇ ಅಧಿವೇಶನ**

# ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2021

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–50)**

ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಸಂರಕ್ಷಣೆಗಾಗಿ ಮತ್ತು ತಪ್ಪು ನಿರೂಪಣೆ, ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷದ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಕಾನೂನು ಬಾಹಿರ ಮತಾಂತರ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಸಂರಕ್ಷಣೆಗಾಗಿ ಮತ್ತು ತಪ್ಪು ನಿರೂಪಣೆ, ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷದ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಕಾನೂನು ಬಾಹಿರವಾಗಿ ಮತಾಂತರ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

**1. ಸಂಕ್ಷಿಪ್ತ, ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-**(1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಆಮಿಷ" ಎಂಬುವುದು ಈ ಮುಂದಿನ ಯಾವುದೇ ರೀತಿಯ ಪ್ರಲೋಭನೆ ಒಡ್ಡುವುದನ್ನು ಒಳಗೊಳ್ಳುತ್ತದೆ,-

(i) ನಗದು ರೂಪದಲ್ಲಾಗಲೀ ಅಥವಾ ವಸ್ತುವಿನ ರೂಪದಲ್ಲಾಗಲೀ ನೀಡುವ ಯಾವುದೇ ಉಡುಗೊರೆ, ಪ್ರತಿಫಲ, ಸುಲಭ ಹಣ ಅಥವಾ ಭೌತಿಕ ಪ್ರಯೋಜನ;

(ii) ಯಾವುದೇ ಧಾರ್ಮಿಕ ಸಂಸ್ಥೆಯು ನಡೆಸುವ ಶಾಲೆ ಅಥವಾ ಕಾಲೇಜಿನಲ್ಲಿ ಉದ್ಯೋಗ, ಉಚಿತ ಶಿಕ್ಷಣ; ಅಥವಾ

(iii) ಮದುವೆಯಾಗುವುದಾಗಿ ವಾಗ್ದಾನ ಮಾಡುವುದು; ಅಥವಾ

(iv) ಉತ್ತಮ ಜೀವನ ಶೈಲಿ, ದೈವಿಕ ಅಸಂತೋಷ ಅಥವಾ ಅನ್ಯಥಾ; ಅಥವಾ

(v) ಯಾವುದೇ ಧರ್ಮದ ಅವಿಭಾಜ್ಯ ಅಂಗವಾಗಿರುವ ಪದ್ಧತಿಗಳು, ಸಂಪ್ರದಾಯಗಳು ಅಥವಾ ಆಚರಣೆಗಳನ್ನು ಇನ್ನೊಂದು ಧರ್ಮಕ್ಕೆ ಎದುರಾಗಿ ಧಕ್ಕೆಯಾಗುವ ರೀತಿಯಲ್ಲಿ ಚಿತ್ರಿಸುವುದು; ಅಥವಾ

(vi) ಒಂದು ಧರ್ಮವನ್ನು ಇನ್ನೊಂದು ಧರ್ಮಕ್ಕೆ ವಿರುದ್ಧವಾಗಿ ವೈಭವಿಕರಿಸುವುದು:

(ಬಿ) "ಒತ್ತಾಯ" ಎಂದರೆ ಯಾರೇ ವ್ಯಕ್ತಿಯನ್ನು ಶಾರೀರಿಕ ಹಾನಿ ಉಂಟು ಮಾಡುವ ಅಥವಾ ಅದರ ಬೆದರಿಕೆ ಒಡ್ಡುವ ಮಾನಸಿಕ ಒತ್ತಡ ಅಥವಾ ದೈಹಿಕ ಬಲಪ್ರಯೋಗ ಬಳಸಿ ಆತನ ಇಚ್ಛೆಗೆ ವಿರುದ್ಧವಾಗಿ ಕೆಲಸ ಮಾಡುವಂತೆ ಒತ್ತಾಯಿಸುವುದು:

(ಸಿ) "ಮತಾಂತರ" ಎಂದರೆ ಯಾರೇ ವ್ಯಕ್ತಿಯು ತನ್ನ ಸ್ವಂತ ಧರ್ಮವನ್ನು ತ್ಯಜಿಸಿ ಮತ್ತೊಂದು ಧರ್ಮವನ್ನು ಅಳವಡಿಸಿಕೊಳ್ಳುವುದು;

(ಡಿ) "ಬಲವಂತ" ಎಂಬುದು ಮತಾಂತರಗೊಂಡ ಅಥವಾ ಮತಾಂತರಗೊಳ್ಳುವಂತೆ ಕೋರಲಾದ ವ್ಯಕ್ತಿಯ ಮೇಲೆ ಒತ್ತಾಯ ಪ್ರದರ್ಶಿಸುವುದು ಅಥವಾ ಅಂಥ ವ್ಯಕ್ತಿ ಅಥವಾ ಇತರ ಯಾರೇ ವ್ಯಕ್ತಿ ಅಥವಾ ಸ್ವತ್ತಿಗೆ ಯಾವುದೇ ಬಗೆಯ ಹಾನಿ ಉಂಟು ಮಾಡುವ ಬೆದರಿಕೆಯನ್ನು ಒಡ್ಡುವುದೂ ಒಳಗೊಂಡಿರುತ್ತದೆ;

(ಇ) "ವಂಚನೆ" ಎಂಬುದು ಸುಳ್ಳು ಹೆಸರು, ಅಡ್ಡ ಹೆಸರು, ಧಾರ್ಮಿಕ ಸಂಕೇತ ಅಥವಾ ಅನ್ಯಥಾ ವಿಧಾನಗಳ ಮೂಲಕ ಯಾವುದೇ ರೀತಿಯಲ್ಲಿ ಮತ್ತೊಬ್ಬ ವ್ಯಕ್ತಿಯಂತೆ ನಟಿಸುವುದನ್ನು ಒಳಗೊಳ್ಳುತ್ತದೆ;

(ಎಫ್) "ನಮೂನೆ" ಎಂದರೆ, ಈ ಅಧಿನಿಯಮಿಕ್ಕೆ ಅನುಬಂಧಿಸಲಾದ ನಮೂನೆ.

(ಜಿ) "ಸಂಸ್ಥೆಗಳು"ಎಂದರೆ ಎಲ್ಲಾ ಕಾನೂನು ಸಮ್ಮತ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಆಸ್ಪತ್ರೆಗಳು, ಧಾರ್ಮಿಕ ಮಿಷನರಿಗಳು, ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ಅಂಥ ಇತರ ಸಂಘಗಳನ್ನು ಒಳಗೊಳ್ಳುತ್ತದೆ.

(ಹೆಚ್) "ಸಾಮೂಹಿಕ ಮತಾಂತರ" ಎಂದರೆ, ಇಬ್ಬರು ಅಥವಾ ಹೆಚ್ಚಿನ ಜನರು ಮತಾಂತರಗೊಳ್ಳುವುದು;

(ಐ) "ಅಪ್ರಾಪ್ತ" ಎಂದರೆ ಹದಿನೆಂಟು ವರ್ಷಗಳ ವಯಸ್ಸಿನೊಳಗಿರುವ ವ್ಯಕ್ತಿ;

(ಜೆ) "ಮೂಲ ಧರ್ಮ" ಎಂದರೆ ವ್ಯಕ್ತಿಯ ಮತಾಂತರಕ್ಕೆ ಮೊದಲಿನ ಧರ್ಮ;

(ಕೆ) "ಧರ್ಮ" ಎಂದರೆ, ಭಾರತದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಪ್ರಚಲಿತದಲ್ಲಿರುವಂತೆ ಪೂಜಾ ವಿಧಾನ, ಶ್ರದ್ಧೆ, ನಂಬಿಕೆ, ಆರಾಧನೆ ಅಥವಾ ಜೀವನ ಶೈಲಿಯ ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಪದ್ಧತಿಯ ಮೇರೆಗೆ ಪರಿಭಾಷಿಸಿರುವ ಯಾವುದೇ ಸಂಘಟಿತ ವ್ಯವಸ್ಥೆ;

(ಎಲ್) "ಮತಾಂತರ ಮಾಡುವವನು" ಎಂದರೆ, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಯಾವುದೇ ಮತಾಂತರದ ಕಾರ್ಯವನ್ನು ನಿರ್ವಹಿಸುವ ಹಾಗೂ ಪಾದ್ರಿ, ಅರ್ಚಕ, ಪುರೋಹಿತ, ಪಂಡಿತ, ಮೌಲ್ವಿ ಅಥವಾ ಮುಲ್ಲಾ ಮೊದಲಾದಂಥ ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಧರ್ಮದ ವ್ಯಕ್ತಿ;ಮತ್ತು

(ಎಂ) "ಅನುಚಿತ ಪ್ರಭಾವ" ಎಂದರೆ, ಒಬ್ಬ ವ್ಯಕ್ತಿಯು ತನ್ನ ಅಧಿಕಾರ ಅಥವಾ ಪ್ರಭಾವವನ್ನು, ಅಂಥ ಪ್ರಭಾವವನ್ನು ಚಲಾಯಿಸುವ ವ್ಯಕ್ತಿಯ ಇಚ್ಛೆಗೆ ಅನುಸಾರವಾಗಿ ಕಾರ್ಯನಿರ್ವಹಿಸುವಂತೆ ಇನ್ನೊಬ್ಬರನ್ನು ಮನಗಾಣಿಸುವ ಸಲುವಾಗಿ, ಇನ್ನೊಬ್ಬ ವ್ಯಕ್ತಿಯ ಮೇಲೆ ವಿವೇಚನಾರಹಿತವಾಗಿ ಬಳಸುವುದು;

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರಲ್ಲಿ ( 1899ರ ಕರ್ನಾಟಕ ಅಧಿನಿಯಮ 03) ಅವುಗಳಿಗೆ ವಹಿಸಿದ ಅರ್ಥವನ್ನೇ ಹೊಂದಿರತಕ್ಕದ್ದು.

**3. ತಪ್ಪು ನಿರೂಪಣೆ, ಬಲವಂತ, ವಂಚನೆ, ಅನುಚಿತ ಪ್ರಭಾವ, ಒತ್ತಾಯ, ಆಮಿಷ ಒಡ್ಡುವ ಮೂಲಕ ಅಥವಾ ಮದುವೆಯ ವಾಗ್ದಾನದ ಮೂಲಕ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮಾಡುವ ಮತಾಂತರದ ನಿಷೇಧ.-** ಯಾರೇ ವ್ಯಕ್ತಿಯು, ತಪ್ಪು ನಿರೂಪಣೆ, ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷಒಡ್ಡುವ ಕ್ರಮಗಳ ಬಳಕೆ ಅಥವಾ ಪದ್ಧತಿಯ ಮೂಲಕ ಅಥವಾ ಯಾವುದೇ ವಂಚನೆ ವಿಧಾನಗಳ ಮೂಲಕ ಅಥವಾ ಮದುವೆಯ ವಾಗ್ದಾನದ ಮೂಲಕ ಇತರೆ ಯಾರೇ ವ್ಯಕ್ತಿಯನ್ನು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ನೇರವಾಗಿಯಾಗಲಿ ಅಥವಾ ಬೇರೆ ರೀತಿಯಿಂದಾಗಲಿ ಮತಾಂತರ ಮಾಡತಕ್ಕದ್ದಲ್ಲ ಅಥವಾ ಮತಾಂತರ ಮಾಡಲು ಪ್ರಯತ್ನಿಸತಕ್ಕದ್ದಲ್ಲ ಇಲ್ಲವೇ ಯಾರೇ ವ್ಯಕ್ತಿಯನ್ನು ಅಂಥ ಮತಾಂತರಕ್ಕೆ ದುಷ್ಪ್ರೇರಿಸತಕ್ಕದ್ದಲ್ಲ ಅಥವಾ ಪಿತೂರಿ ಮಾಡತಕ್ಕದ್ದಲ್ಲ;

ಪರಂತು, ಯಾರೇ ವ್ಯಕ್ತಿಯು ಆತನ ನಿಕಟ ಪೂರ್ವ ಧರ್ಮಕ್ಕೆ ಮರು ಮತಾಂತರಗೊಂಡಲ್ಲಿ ಅದನ್ನು ಈ ಅಧಿನಿಯಮದ ಅಡಿಯಲ್ಲಿ ಮತಾಂತರವೆಂದು ಭಾವಿಸತಕ್ಕದ್ದಲ್ಲ.

**4. ದೂರನ್ನು ದಾಖಲಿಸಲು ಸಕ್ಷಮನಾದ ವ್ಯಕ್ತಿ**.-ಯಾರೇ ಮತಾಂತರಗೊಂಡ ವ್ಯಕ್ತಿ, ಆತನ ಪಾಲಕರು, ಸೋದರ, ಸೋದರಿ ಅಥವಾ ಆತನಿಗೆ ರಕ್ತ ಸಂಬಂಧಿ, ಮದುವೆ ಅಥವಾ ದತ್ತು ಮೂಲಕ ಸಂಬಂಧಿಯಾದ ಅಥವಾ ಯಾವುದೇ ರೂಪದಲ್ಲಿ ಸಹವರ್ತಿ ಅಥವಾ ಸಹೋದ್ಯೋಗಿಯಾದ ಇತರ ಯಾರೇ ವ್ಯಕ್ತಿಯು 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಂಥ ಮತಾಂತರದ ಬಗ್ಗೆ ದೂರನ್ನು ದಾಖಲು ಮಾಡಬಹುದು.

**5. 3ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ**.- (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಂತಹ ಯಾರೇ ವ್ಯಕ್ತಿಯು, ಯಾವುದೇ ಸಿವಿಲ್ ಹೊಣೆಗಾರಿಕೆಗೆ ಬಾಧಕವಾಗದಂತೆ, ಮೂರು ವರ್ಷಗಳ ಅವಧಿಯ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಹಾಗೂ ಇಪ್ಪತ್ತೈದು ಸಾವಿರ ರೂಪಾಯಿಗಳ ಜುಲ್ಮಾನೆಗೂ ಹೊಣೆಗಾರನಾಗಿರತಕ್ಕದ್ದು;

ಪರಂತು, ಅಪ್ರಾಪ್ತ ಅಥವಾ ಅಸ್ವಸ್ಥಚಿತ್ತ ವ್ಯಕ್ತಿ ಅಥವಾ ಮಹಿಳೆ ಅಥವಾ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿಯ ಸಂದರ್ಭದಲ್ಲಿ 3ನೇ ಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ ಅವರು ಮೂರು ವರ್ಷಗಳ ಅವಧಿಯ ಆದರೆ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತರಾಗತಕ್ಕದ್ದು ಹಾಗೂ ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

ಮತ್ತು ಪರಂತು, ಸಾಮೂಹಿಕ ಮತಾಂತರದ ಸಂದರ್ಭದಲ್ಲಿ 3ನೇ ಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಅವರು ಮೂರು ವರ್ಷಗಳ ಅವಧಿಯ ಆದರೆ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತರಾಗತಕ್ಕದ್ದು ಹಾಗೂ ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಸದರಿ ಮತಾಂತರಕ್ಕೆ ಬಲಿಯಾದವರಿಗೆ ಆಪಾದಿತನಿಂದ ಸಂದಾಯವಾಗುವಂತೆ ಗರಿಷ್ಠ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಯುಕ್ತ ಪರಿಹಾರವನ್ನು ಸಹ ನ್ಯಾಯಾಲಯವು ಮಂಜೂರು ಮಾಡತಕ್ಕದ್ದು ಹಾಗೂ ಅದು ಜುಲ್ಮಾನೆಗೆ ಹೆಚ್ಚುವರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ ಹಿಂದೆಯೇ ಅಪರಾಧ ನಿರ್ಣಿತನಾದ ಯಾರೇ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿನ ದಂಡನೀಯ ಅಪರಾಧಕ್ಕೆ ಮತ್ತೊಮ್ಮೆ ಅಪರಾಧ ನಿರ್ಣಿತನಾದರೆ ಆತನು ಐದು ವರ್ಷಗಳಿಗೆ ಕಡಿಮೆಯಿರದ ಅವಧಿಗೆ ಕಾರಾವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಎರಡು ಲಕ್ಷ ರೂಪಾಯಿಗಳ ಜುಲ್ಮಾನೆಗೂ ಸಹ ಹೊಣೆಗಾರನಾಗಿರತಕ್ಕದ್ದು.

**6. ಕಾನೂನು ಬಾಹಿರ ಮತಾಂತರ ಅಥವಾ ವಿಪರ್ಯಯದ ಏಕ ಮಾತ್ರ ಉದ್ದೇಶಕ್ಕಾಗಿ ಮಾಡಿದ ಮದುವೆಯನ್ನು ಅಸಿಂಧುವೆಂದು ಘೋಷಿಸುವುದು**.- ಒಂದು ಧರ್ಮದ ಪುರುಷನು ಮತ್ತೊಂದು ಧರ್ಮದ ಮಹಿಳೆಯೊಂದಿಗೆ ಮದುವೆಗೆ ಮುಂಚೆ ಅಥವಾ ನಂತರ ಆತನೇ ಮತಾಂತರಗೊಳ್ಳುವ ಮೂಲಕ ಅಥವಾ ಮದುವೆಗೆ ಮುಂಚೆ ಅಥವಾ ನಂತರ ಮಹಿಳೆಯನ್ನು ಮತಾಂತರಗೊಳಿಸುವ ಮೂಲಕ ಕಾನೂನು ಬಾಹಿರ ಮತಾಂತರ ಅಥವಾ ವಿಪರ್ಯಯದ ಏಕ ಮಾತ್ರ ಉದ್ದೇಶದಿಂದ ನಡೆದ ಯಾವುದೇ ಮದುವೆಯನ್ನು ಕೌಟುಂಬಿಕ ನ್ಯಾಯಾಲಯವು ಅಕೃತ ಮತ್ತು ಶೂನ್ಯವೆಂದು ಘೋಷಿಸತಕ್ಕದ್ದು ಅಥವಾ ಕೌಟುಂಬಿಕ ನ್ಯಾಯಾಲಯವು ಸ್ಥಾಪಿಸಿರದಿದ್ದಲ್ಲಿ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ಮದುವೆಯ ಇಬ್ಬರೂ ಪಕ್ಷಕಾರರು ಮತ್ತೊಬ್ಬ ಪಕ್ಷಕಾರರ ಮೇಲೆ ಸಲ್ಲಿಸಿದ ಅರ್ಜಿಯ ಮೇರೆಗೆ ಅಂಥ ಪ್ರಕರಣವನ್ನು ವಿಚಾರಣೆ ನಡೆಸತಕ್ಕದ್ದು;

ಪರಂತು, 8 ಮತ್ತು 9ನೇ ಪ್ರಕರಣದ ಎಲ್ಲಾ ಉಪಬಂಧಗಳು ವಿಧಿವತ್ತಾಗಿ ನೆರವೇರಿಸುವ ಅಂಥ ಮದುವೆಗಳಿಗೆ ಅನ್ವಯವಾಗತಕ್ಕದ್ದು.

**7. ಅಪರಾಧವು ಜಾಮೀನು ರಹಿತ ಮತ್ತು ಸಂಜ್ಞೇಯವಾಗಿರುವುದು**.- ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಎಸಗಲಾದ ಪ್ರತಿಯೊಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನು ರಹಿತವಾಗಿರತಕ್ಕದ್ದು.

**8. ಧರ್ಮದ ಮತಾಂತರಕ್ಕೆ ಮೊದಲು ಘೋಷಣೆ ಹಾಗೂ ಮತಾಂತರದ ಕುರಿತು ಪೂರ್ವ ವರದಿ.-** (1) ತನ್ನ ಧರ್ಮದಿಂದ ಮತಾಂತರಗೊಳ್ಳಲು ಇಚ್ಛಿಸುವ ಯಾರೇ ವ್ಯಕ್ತಿಯು, ಕನಿಷ್ಠ ಮೂವತ್ತು ದಿವಸಗಳಿಗೆ ಮುಂಚಿತವಾಗಿ ರಾಜ್ಯದೊಳಗಿನ ತನ್ನ ನಿವಾಸದ ಜಿಲ್ಲೆಯ ಅಥವಾ ಜನ್ಮ ಸ್ಥಳದ ಜಿಲ್ಲಾ ದಂಡಾಧಿಕಾರಿಗೆ ಅಥವಾ ಈ ಬಗ್ಗೆ ಜಿಲ್ಲಾ ದಂಡಾಧಿಕಾರಿಯವರು ವಿಶೇಷವಾಗಿ ಅಧಿಕಾರ ನೀಡಿದ ಜಿಲ್ಲಾ ಅಪರ ದಂಡಾಧಿಕಾರಿ ಇವರಿಗೆ ನಮೂನೆ I ರಲ್ಲಿ ಘೋಷಣೆಯನ್ನು ನೀಡತಕ್ಕದ್ದು.

(2) ಯಾರೇ ವ್ಯಕ್ತಿಯನ್ನು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಮಾಡುವುದಕ್ಕಾಗಿ ಮತಾಂತರದ ವಿಧಿವಿಧಾನಗಳನ್ನು ನೆರವೇರಿಸುವ ಧಾರ್ಮಿಕ ಮತಾಂತರ ಮಾಡುವವನು ಅಂಥ ಉದ್ದೇಶಿತ ಮತಾಂತರ ಕುರಿತು ಅಂಥ ಉದ್ದೇಶಿತ ಮತಾಂತರ ಮಾಡುವವನು ಯಾವ ಜಿಲ್ಲೆಗೆ ಸೇರಿರುವನೋ ಆ ಜಿಲ್ಲೆಯ ಜಿಲ್ಲಾ ದಂಡಾಧಿಕಾರಿಗೆ ಅಥವಾ ಈ ಬಗ್ಗೆ ಜಿಲ್ಲಾ ದಂಡಾಧಿಕಾರಿಯವರು ವಿಶೇಷವಾಗಿ ಅಧಿಕಾರ ನೀಡಿದ ಅಪರ ಜಿಲ್ಲಾ ದಂಡಾಧಿಕಾರಿ ಇವರಿಗೆ ನಮೂನೆ II ರಲ್ಲಿ ಮೂವತ್ತು ದಿನಗಳ ಮುಂಗಡ ನೋಟೀಸನ್ನು ನೀಡತಕ್ಕದ್ದು.

(3) ಜಿಲ್ಲಾ ದಂಡಾಧಿಕಾರಿಯು, (1) ಮತ್ತು (2) ನೇ ಉಪ-ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಜಿಲ್ಲಾ ದಂಡಾಧಿಕಾರಿಯವರ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ತಹಶೀಲ್ದಾರ್ ರವರ ಕಛೇರಿಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಉದ್ದೇಶಿತ ಧಾರ್ಮಿಕ ಮತಾಂತರದ ಬಗ್ಗೆ ಅಧಿಸೂಚಿಸತಕ್ಕದ್ದು. ಮೂವತ್ತು ದಿನಗಳ ಒಳಗಾಗಿ ಯಾವುದಾದರೂ ಆಕ್ಷೇಪಣೆಗಳು ಬಂದರೆ, ಪ್ರಸ್ತಾಪಿತ ಮತಾಂತರದ ನೈಜ ಆಶಯ, ಉದ್ದೇಶ ಮತ್ತು ಕಾರಣದ ಬಗ್ಗೆ ಕಂದಾಯ ಅಥವಾ ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ವಿಚಾರಣೆಯನ್ನು ನಡೆಸತಕ್ಕದ್ದು.

(4) ಜಿಲ್ಲಾ ದಂಡಾಧಿಕಾರಿಯು, ಸದರಿ ವಿಚಾರಣೆಯ ಆಧಾರದ ಮೇಲೆ ಈ ಅಧಿನಿಯಮದ ಅಡಿ ಅಪರಾಧವನ್ನು ಎಸಗಿರುವರೆಂಬ ತೀರ್ಮಾನಕ್ಕೆ ಬಂದರೆ, ಅವರು 3ನೇ ಪ್ರಕರಣದ ಉಪಬಂಧಗಳ

ಉಲ್ಲಂಘನೆಗಾಗಿ ಕ್ರಿಮಿನಲ್ ಕ್ರಮವನ್ನು ಹೂಡುವಂತೆ ಸಂಬಂಧಪಟ್ಟ ಪೊಲೀಸ್ ಪ್ರಾಧಿಕಾರಿಗಳಿಗೆ ಸೂಚಿಸತಕ್ಕದ್ದು.

(5) (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಮಾಡುವ ಯಾವುದೇ ಮತಾಂತರವು ಕಾನೂನು ಬಾಹಿರ ಮತ್ತು ಅಸಿಂಧುವಾಗಿರುತ್ತದೆ.

(6) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಹಾಗೂ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಜುಲ್ಮಾನೆಗೆ ಹೊಣೆಗಾರನಾಗತಕ್ಕದ್ದು.

(7) (2)ನೇ ಉಪ-ಪ್ರಕರಣದ ಉಪ-ಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಒಂದು ವರ್ಷಕ್ಕೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಗೆ ಹೊಣೆಗಾರನಾಗತಕ್ಕದ್ದು.

**9. ಧಾರ್ಮಿಕ ಮತಾಂತರೋತ್ತರ ಘೋಷಣೆ**.-(1) ಮತಾಂತರಗೊಂಡ ವ್ಯಕ್ತಿಯು ಮತಾಂತರದ ದಿನಾಂಕದಿಂದ ಮೂವತ್ತು ದಿನದೊಳಗಾಗಿ ನಮೂನೆ IIIರಲ್ಲಿ ಆತನು ಮತಾಂತರದ ದಿನಾಂಕಕ್ಕೆ ಪೂರ್ವದಲ್ಲಿ ವಾಸವಾಗಿರುವ ಜಿಲ್ಲೆಯ ಜಿಲ್ಲಾ ದಂಡಾಧಿಕಾರಿಗೆ ಅಥವಾ ಜಿಲ್ಲಾ ದಂಡಾಧಿಕಾರಿಯು ಈ ಬಗ್ಗೆ ವಿಶೇಷವಾಗಿ ಅಧಿಕೃತಗೊಳಿಸಿದ ಅಪರ ಜಿಲ್ಲಾ ದಂಡಾಧಿಕಾರಿಗೆ ಘೋಷಣೆಯನ್ನು ಕಳುಹಿಸತಕ್ಕದ್ದು.

(2) ಜಿಲ್ಲಾ ದಂಡಾಧಿಕಾರಿಯು, ಜಿಲ್ಲಾ ದಂಡಾಧಿಕಾರಿಯ ಕಛೇರಿಯ ಸೂಚನಾ ಫಲಕದ ಮೇಲೆ ಹಾಗೂ ತಹಶೀಲ್ದಾರ ಕಛೇರಿಯ ಸೂಚನಾ ಫಲಕದ ಮೇಲೆ ಧಾರ್ಮಿಕ ಮತಾಂತರದ ಬಗ್ಗೆ ಅಧಿಸೂಚಿಸತಕ್ಕದ್ದು ಮತ್ತು ಈ ಮುಂಚೆ 8ನೇ ಪ್ರಕರಣದ ಅಡಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಕರೆಯದಿದ್ದ ಸಂದರ್ಭದಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು.

(3) ಸದರಿ ಘೋಷಣೆಯು,ಅಗತ್ಯ ವಿವರಗಳನ್ನು ಎಂದರೆ ಜನ್ಮ ದಿನಾಂಕ, ಖಾಯಂ ವಿಳಾಸ, ಪ್ರಸ್ತುತ ವಾಸವಿರುವ ಸ್ಥಳ, ತಂದೆ/ಗಂಡನ ಹೆಸರು, ಮೂಲತವಾಗಿ ಸೇರಿರುವ ಧರ್ಮ ಮತ್ತು ಆತನು ಮತಾಂತರಗೊಂಡ ಧರ್ಮ, ಮತಾಂತರದ ದಿನಾಂಕ ಮತ್ತು ಸ್ಥಳ ಹಾಗೂ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್‌ನ ಪ್ರತಿಯೊಂದಿಗೆ ಮತಾಂತರಕ್ಕೊಳಗಾದ ಕಾರ್ಯವಿಧಾನದ ಸ್ವರೂಪದಂಥಹ ಮತಾಂತರ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಮತಾಂತರಗೊಂಡ ವ್ಯಕ್ತಿಯು, ತನ್ನ ಗುರುತನ್ನು ಸ್ಥಾಪಿಸಲು ಮತ್ತು ಘೋಷಣೆ ಅಂಶಗಳನ್ನು ಸ್ಥಿರೀಕರಿಸಲು ಘೋಷಣೆಯನ್ನು ಕಳುಹಿಸಿರುವ/ಸಲ್ಲಿಸಿರುವ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಜಿಲ್ಲಾ ದಂಡಾಧಿಕಾರಿಯ ಮುಂದೆ ಹಾಜರಾಗಿರತಕ್ಕದ್ದು;

(5) ಜಿಲ್ಲಾ ದಂಡಾಧಿಕಾರಿಯು ಮೂವತ್ತು ದಿನಗಳೊಳಗೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿದರೆ ಆತನು ಆಕ್ಷೇಪಣೆ ಸಲ್ಲಿಸಿದವರ ಹೆಸರು ಮತ್ತು ವಿವರಗಳನ್ನು ಹಾಗೂ ಆಕ್ಷೇಪಣೆ ಸ್ವರೂಪವನ್ನು ದಾಖಲಿಸಿ, ಕಂದಾಯ ಅಥವಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಮುಖಾಂತರ ಮತಾಂತರದ ನೈಜ ಆಶಯ, ಉದ್ದೇಶ ಮತ್ತು ಕಾರಣಗಳ ವಿಚಾರಣೆಯನ್ನು ನಡೆಸತಕ್ಕದ್ದು.

(6) ಜಿಲ್ಲಾ ದಂಡಾಧಿಕಾರಿಯು ಸದರಿ ವಿಚಾರಣೆಯನ್ನಾಧರಿಸಿ ಈ ಅಧಿನಿಯಮದ ಅಡಿಯಲ್ಲಿ ಅಪರಾಧವಾಗುವುದೆಂಬ ನಿರ್ಣಯಕ್ಕೆ ಬಂದಿದ್ದರೆ ಆತನು 3ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ಅಪರಾಧಿಕ(ಕ್ರಿಮಿನಲ್) ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಪೊಲೀಸ್ ಪ್ರಾಧಿಕಾರಿಗೆ ಸೂಚಿಸತಕ್ಕದ್ದು.

(7) (1)ರಿಂದ (4)ನೇ ಉಪ-ಪ್ರಕರಣಗಳ ಉಪಬಂಧನೆಗಳ ಉಲ್ಲಂಘನೆಯು ಸದರಿ ಮತಾಂತರವನ್ನು ಕಾನೂನುಬಾಹಿರ ಮತ್ತು ಅಸಿಂಧುಗೊಳಿಸುವಂಥ ಪರಿಣಾಮ ಹೊಂದಿರತಕ್ಕದ್ದು.

(8) ಅಂಥ ಮತಾಂತರಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿದರೆ ಜಿಲ್ಲಾ ದಂಡಾಧಿಕಾರಿಯು ಈ ಉದ್ದೇಶಕ್ಕಾಗಿ ನಿರ್ವಹಿಸಿಕೊಂಡು ಬಂದಿರುವಂಥ ರಿಜಿಸ್ಟರ್‌ನಲ್ಲಿ ಘೋಷಣೆ ಮತ್ತು ಸ್ಥಿರೀಕರಣದ ಅಂಶವನ್ನು ದಾಖಲಿಸತಕ್ಕದ್ದು. ಅಲ್ಲದೇ ಜಿಲ್ಲಾ ದಂಡಾಧಿಕಾರಿಯು ಅಧಿಕೃತ ಅಧಿಸೂಚನೆಯನ್ನು ಹೊರಡಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಅಂಥ ಮತಾಂತರದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

**ವಿವರಣೆ:-** ಈ ಉಪ ಪ್ರಕರಣದ ಉದ್ದೇಶಕ್ಕಾಗಿ "ಸಂಬಂಧಪಟ್ಟ ಪ್ರಾಧಿಕಾರ" ಎಂದರೆ, ಆತನ ನಿಯೋಜಕ, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಇತರ ಸಂಬಂಧಪಟ್ಟ ಇಲಾಖೆ, ನಗರ ಮತ್ತು ಗ್ರಾಮೀಣ ಸ್ಥಳೀಯ ನಿಕಾಯಗಳ ಸಿಬ್ಬಂದಿಗಳು ಶೈಕ್ಷಣಿಕ ಸಂಸ್ಥೆಗಳ ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರು ಇತ್ಯಾದಿ.

(9) ಅಂಥ ಸೂಚನೆಯನ್ನು ಸ್ವೀಕರಿಸಿದ ತರುವಾಯ, ಸಂಬಂಧಪಟ್ಟ ಪ್ರಾಧಿಕಾರವು, ಮತಾಂತರದ ಬಗ್ಗೆ ಸಂಬಂಧಪಟ್ಟ ಅಧಿಕೃತ ದಾಖಲೆಗಳಲ್ಲಿ ನಮೂದಿಸುವಂತೆ ಮಾಡತಕ್ಕದ್ದು ಹಾಗೂ ಮತಾಂತರಗೊಂಡ ವ್ಯಕ್ತಿಯು ಮತಾಂತರಕ್ಕೆ ಮೊದಲು ಪಡೆಯುತ್ತಿದ್ದ ಸಾಮಾಜಿಕ ಸ್ಥಾನಮಾನ ಅನುಭವಿಸುವ ಅಥವಾ ಆತನು ಸರ್ಕಾರದಿಂದ ಪಡೆಯುತ್ತಿದ್ದ ಹಣಕಾಸಿನ ಪ್ರಯೋಜನಗಳನ್ನು ಸ್ವೀಕರಿಸುವ ಹಕ್ಕಿಗಾಗಿ ಮತಾಂತರಗೊಂಡ ವ್ಯಕ್ತಿಯನ್ನು ಪುನರ್ ವರ್ಗೀಕರಿಸುವಂತೆ ಮಾಡತಕ್ಕದ್ದು.

**10. ಸಂಸ್ಥೆಯ ಮೂಲಕ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.**-(1) ಯಾವುದೇ ಸಂಸ್ಥೆಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದ್ದರೆ, ಸಂಸ್ಥೆಯ ವ್ಯವಹಾರಗಳ ಪ್ರಭಾವದಲ್ಲಿರುವ ವ್ಯಕ್ತಿ ಅಥವಾ ವ್ಯಕ್ತಿಗಳು, 5ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ ದಂಡನೆಗೆ ಗುರಿಯಾಗತಕ್ಕದ್ದು

(2) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವಂಥ ಸಂಸ್ಥೆಗೆ ಯಾವುದೇ ಹಣಕಾಸಿನ ನೆರವು ಅಥವಾ ಅನುದಾನವನ್ನು ಒದಗಿಸತಕ್ಕದ್ದಲ್ಲ.

**11. ಅಪರಾಧದ ಪಕ್ಷಕಾರರು.**-ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧ ಎಸಗಿದ್ದಲ್ಲಿ,-

(i)ವಾಸ್ತವಿಕವಾಗಿ ಅಪರಾಧವನ್ನಾಗುವಂಥ ಕೃತ್ಯವನ್ನು ಮಾಡುವ ; ಮತ್ತು

(ii) ಅಪರಾಧವನ್ನು ಎಸಗುವಲ್ಲಿ ಮತ್ತೊಬ್ಬ ವ್ಯಕ್ತಿಗೆ ನೆರವು ನೀಡುವ ಅಥವಾ ದುಷ್ಪ್ರೇರೇಪಿಸುವ;

-ಪ್ರತಿಯೊಬ್ಬ ವ್ಯಕ್ತಿಯು ಅಪರಾಧವನ್ನು ಎಸಗುವಲ್ಲಿ ಭಾಗವಹಿಸಿದ್ದರೆಂದು ಭಾವಿಸತಕ್ಕದ್ದು ಮತ್ತು ಆತನನ್ನು ಅಪರಾಧದ ದೋಷಿಯಾಗಿಸತಕ್ಕದ್ದು ಮತ್ತು ಆತನು ವಾಸ್ತವಿಕವಾಗಿ ಸದರಿ ಅಪರಾಧವನ್ನು ಎಸಗಿದ್ದಾರೆ ಹೇಗೋ ಹಾಗೆ ಆರೋಪಿಯನ್ನಾಗಿಸತಕ್ಕದ್ದು.

**12. ರುಜುವಾತಿನ ಭಾರ.**-ಮತಾಂತರವನ್ನು ತಪ್ಪು ನಿರೂಪಣೆ, ಒತ್ತಾಯ, ಅನುಚಿತ ಪ್ರಭಾವ, ಬಲವಂತ, ಪ್ರಲೋಭನೆಯ ಮೂಲಕ ಅಥವಾ ಯಾವುದೇ ವಂಚನೆಯ ಸಾಧನಗಳ ಮೂಲಕ ಅಥವಾ ವಿವಾಹದ ಮೂಲಕ ಮಾಡಲಾಗಿಲ್ಲವೆಂಬುದನ್ನು, ರುಜುವಾತುಪಡಿಸುವ ಹೊಣೆಯು, ಮತಾಂತರವನ್ನು ಮಾಡಿದ ವ್ಯಕ್ತಿಯ ಮೇಲೆ ಅಥವಾ ಯಾವೊಬ್ಬ ವ್ಯಕ್ತಿಯು ಅಂಥ ಮತಾಂತರಕ್ಕೆ ನೆರವು ನೀಡಿರುವನೊ ಅಥವಾ ದುಷ್ಪ್ರೇರೇಪಿಸಿರುವನೋ ಆ ವ್ಯಕ್ತಿಯ ಮೇಲೆ ಇರತಕ್ಕದ್ದು.

**13. ನಮೂನೆಗಳನ್ನು ತಿದ್ದುಪಡಿ ಮಾಡುವ ಅಧಿಕಾರ**.- ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ನಮೂನೆಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದುಗಳನ್ನು ಸೇರಿಸಬಹುದು, ವ್ಯತ್ಯಾಸಗೊಳಿಸಬಹುದು ಅಥವಾ ಬಿಟ್ಟುಬಿಡಬಹುದು

**14.ತೊಂದರೆಗಳ ನಿವಾರಣೆ**.- (1) ಈ ಅಧಿನಿಯಮದ ಉಪಬಂಧಗಳನ್ನೂ ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅಥವಾ ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ, ತೊಂದರೆಗಳ ನಿವಾರಣೆಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಈ ಪ್ರಕರಣದಡಿಯಲ್ಲಿ ಅಂಥ ಯಾವುದೇ ಅಧಿಸೂಚನೆಯನ್ನು ಅಥವಾ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

**15.ನಿಯಮಗಳ ರಚನಾಧಿಕಾರ**.–(1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದಲ್ಲಿ ಮತ್ತು/ಅಥವಾ ಮಾಡಕೂಡದೆಂದು ಉಭಯ ಸದನಗಳು ನಿರ್ಧರಿಸಿದಲ್ಲಿ, ಅದರ ತರುವಾಯ ಆ ನಿಯಮವು ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು

ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**ನಮೂನೆ-I**

(8ನೇ ಪ್ರಕರಣದ (1)ನೇ ಉಪಪ್ರಕರಣ ನೋಡಿ)

(ನೋಟೀಸಿನ ನಮೂನೆ)

ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಉದ್ದೇಶಿತ ಮತಾಂತರದ ಕುರಿತು ನೋಟೀಸು

ಇವರಿಗೆ,
ಜಿಲ್ಲಾ ದಂಡಾಧಿಕಾರಿ,
__________ ಜಿಲ್ಲೆ,
ಕರ್ನಾಟಕ.

ಮಾನ್ಯರೇ,

............................ ನಲ್ಲಿ ವಾಸವಾಗಿರುವ ಶ್ರೀ......................ಇವರ ಮಗ/ಮಗಳಾದ .................ನಾನು ....................ಧರ್ಮದಿಂದ .............................. ಧರ್ಮಕ್ಕೆ ಉದ್ದೇಶಿತ ಮತಾಂತರಕ್ಕಾಗಿ 8ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಈ ಮೂಲಕ ನೋಟೀಸನ್ನು ನೀಡುತ್ತಿದ್ದೇನೆ ಮತ್ತು ಮೇಲೆ ಹೇಳಿದ ಉದ್ದೇಶಿತ ಮತಾಂತರದ ವಿವರಗಳು ಈ ಕೆಳಕಂಡಂತಿವೆ.

1.ಮತಾಂತರವಾಗುವ ವ್ಯಕ್ತಿಯ ಹೆಸರು:............................

2.(ಎ) ಮತಾಂತರವಾಗುವ ವ್ಯಕ್ತಿಯ ತಂದೆಯ ಹೆಸರು:.......................

(ಬಿ) ಮತಾಂತರವಾಗುವ ವ್ಯಕ್ತಿಯ ತಾಯಿಯ ಹೆಸರು:.......................

3. ಮತಾಂತರವಾಗುವ ವ್ಯಕ್ತಿಯ ವಿಳಾಸ:............................

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........ ತಾಲ್ಲೂಕು: .........

ಜಿಲ್ಲೆ:.......

4.ವಯಸ್ಸು:.........................(ಜನ್ಮ ದಿನಾಂಕ)

5.ಲಿಂಗ:..............................

6.ವೃತ್ತಿ ಮತ್ತು ಮಾಸಿಕ ವರಮಾನ: ........................

7. ವಿವಾಹಿತರೇ ಅಥವಾ ಅವಿವಾಹಿತರೇ: .......................

8. ಮತಾಂತರವಾಗುವ ವ್ಯಕ್ತಿಯ ಮೇಲೆ ಅವಲಂಭಿತರಾದ ವ್ಯಕ್ತಿ ಯಾರಾದರೂ ಇದ್ದಲ್ಲಿ, ಆ ವ್ಯಕ್ತಿಗಳ ಹೆಸರು: ........................................................

9. ಯಾರಾದರೂ ಅಪ್ರಾಪ್ತರಿದ್ದಲ್ಲಿ, ಪೋಷಕರ ಹೆಸರು ಮತ್ತು ವಿಳಾಸ: ............................

10. ಅನುಸೂಚಿತ ಜಾತಿಗಳು ಮತ್ತು ಪಂಗಡಗಳಿಗೆ ಸೇರಿದವರಾಗಿದ್ದಾರೆಯೇ ಮತ್ತು ಹಾಗಿದ್ದಲ್ಲಿ, ಅಂಥ ಜಾತಿಯ ವಿವರಗಳು: ...........................

11. ಮತಾಂತರದ ಧಾರ್ಮಿಕ ಕಾರ್ಯಾಚರಣೆಯನ್ನು ಮಾಡಲು ಉದ್ದೇಶಿಸಲಾದ ಸ್ಥಳದ ಪೂರ್ಣ ವಿವರಗಳೊಂದಿಗೆ ಆ ಸ್ಥಳದ ಹೆಸರು.

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........

ಜಿಲ್ಲೆ:.......

12. ಮತಾಂತರದ ದಿನಾಂಕ: ........

13. ಧಾರ್ಮಿಕ ಅರ್ಚಕ:

(i) ಹೆಸರು, ಅರ್ಹತೆ ಮತ್ತು ಅನುಭವ: ................

(ii) ವಿಳಾಸ: ..........................

**ಸತ್ಯಾಪನೆ**

................ಆದ ನಾನು ಮೇಲೆ ಹೇಳಿದ ಮಾಹಿತಿಯು ನನ್ನ ಉತ್ತಮ ತಿಳಿವಳಿಕೆ ಹಾಗೂ ನಂಬಿಕೆಗೆ ಅನುಸಾರವಾಗಿ ಸತ್ಯವಾಗಿವೆ ಮತ್ತು ಯಾವುದೇ ಅಂಶವನ್ನು ಗುಪ್ತವಾಗಿಟ್ಟಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಹಿ: ........

ಸ್ಥಳ: .........

ದಿನಾಂಕ: .........

**ನಮೂನೆ-II**

(8ನೇ ಪ್ರಕರಣದ (2)ನೇ ಉಪಪ್ರಕರಣ ನೋಡಿ)

(ಘೋಷಣೆಯ ನಮೂನೆ)

ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಉದ್ದೇಶಿತ ಮತಾಂತರದ ಕುರಿತು ಮಾಹಿತಿ.

ಇವರಿಗೆ,
ಜಿಲ್ಲಾ ದಂಡಾಧಿಕಾರಿ,
__________ ಜಿಲ್ಲೆ,
ಕರ್ನಾಟಕ.

ಮಾನ್ಯರೇ,

............................ ನಲ್ಲಿ ವಾಸವಾಗಿರುವ ಶ್ರೀ......................ಇವರ ಮಗ/ಮಗಳಾದ .................ನಾನು ....................ಧರ್ಮದಿಂದ .............................. ಧರ್ಮಕ್ಕೆ ಉದ್ದೇಶಿತ ಮತಾಂತರಕ್ಕಾಗಿ 8ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಈ ಮೂಲಕ ನೋಟೀಸನ್ನು ನೀಡುತ್ತಿದ್ದೇನೆ ಮತ್ತು ಮೇಲೆ ಹೇಳಿದ ಉದ್ದೇಶಿತ ಮತಾಂತರದ ವಿವರಗಳು ಈ ಕೆಳಕಂಡಂತಿವೆ.

1.ಮತಾಂತರವಾಗುವ ವ್ಯಕ್ತಿಯ ಹೆಸರು:............................

2.(ಎ) ಮತಾಂತರವಾಗುವ ವ್ಯಕ್ತಿಯ ತಂದೆಯ ಹೆಸರು:.......................

(ಬಿ) ಮತಾಂತರವಾಗುವ ವ್ಯಕ್ತಿಯ ತಾಯಿಯ ಹೆಸರು:.......................

3. ಮತಾಂತರವಾಗುವ ವ್ಯಕ್ತಿಯ ವಿಳಾಸ:............................

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........ ತಾಲ್ಲೂಕು: .........

ಜಿಲ್ಲೆ:.......

4.ವಯಸ್ಸು:.........................(ಜನ್ಮ ದಿನಾಂಕ)

5.ಲಿಂಗ:..............................

6.ವೃತ್ತಿ ಮತ್ತು ಮಾಸಿಕ ವರಮಾನ: ........................

7. ವಿವಾಹಿತರೇ ಅಥವಾ ಅವಿವಾಹಿತರೇ: .......................

8. ಮತಾಂತರವಾಗುವ ವ್ಯಕ್ತಿಯ ಮೇಲೆ ಅವಲಂಭಿತರಾದ ವ್ಯಕ್ತಿ ಯಾರಾದರೂ ಇದ್ದಲ್ಲಿ, ಆ ವ್ಯಕ್ತಿಗಳ ಹೆಸರು: ........................................................

9. ಯಾರಾದರೂ ಅಪ್ರಾಪ್ತರಿದ್ದಲ್ಲಿ, ಪೋಷಕರ ಹೆಸರು ಮತ್ತು ವಿಳಾಸ: ............................

10. ಅನುಸೂಚಿತ ಜಾತಿಗಳು ಮತ್ತು ಪಂಗಡಗಳಿಗೆ ಸೇರಿದವರಾಗಿದ್ದಾರೆಯೇ ಮತ್ತು ಹಾಗಿದ್ದಲ್ಲಿ, ಅಂಥ ಜಾತಿಯ ವಿವರಗಳು: ...........................

11. ಮತಾಂತರದ ಧಾರ್ಮಿಕ ಕಾರ್ಯಾಚರಣೆಯನ್ನು ಮಾಡಲು ಉದ್ದೇಶಿಸಲಾದ ಸ್ಥಳದ ಪೂರ್ಣ ವಿವರಗಳೊಂದಿಗೆ ಆ ಸ್ಥಳದ ಹೆಸರು.

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........

ಜಿಲ್ಲೆ:.......

12. ಮತಾಂತರದ ದಿನಾಂಕ: ........

13. ಧಾರ್ಮಿಕ ಅರ್ಚಕ:

(i) ಹೆಸರು, ಅರ್ಹತೆ ಮತ್ತು ಅನುಭವ: ................

(ii) ವಿಳಾಸ: ...........................

**ಸತ್ಯಾಪನೆ**

................ಆದ ನಾನು ಮೇಲೆ ಹೇಳಿದ ಮಾಹಿತಿಯು ನನ್ನ ಉತ್ತಮ ತಿಳಿವಳಿಕೆ ಹಾಗೂ ನಂಬಿಕೆಗೆ ಅನುಸಾರವಾಗಿ ಸತ್ಯವಾಗಿವೆ ಮತ್ತು ಯಾವುದೇ ಅಂಶವನ್ನು ಗುಪ್ತವಾಗಿಟ್ಟಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಹಿ: ........

ಸ್ಥಳ: .........

ದಿನಾಂಕ: .........

**ನಮೂನೆ-III**

(9ನೇ ಪ್ರಕರಣದ (1)ನೇ ಉಪಪ್ರಕರಣ ನೋಡಿ)

(ಘೋಷಣೆಯ ನಮೂನೆ)

ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರದ ಕುರಿತು ಮಾಹಿತಿ.

ಇವರಿಗೆ,

ಜಿಲ್ಲಾ ದಂಡಾಧಿಕಾರಿ,

__________ ಜಿಲ್ಲೆ,

ಕರ್ನಾಟಕ.

ಮಾನ್ಯರೇ,

............................ ನಲ್ಲಿ ವಾಸವಾಗಿರುವ ಶ್ರೀ......................ಇವರ ಮಗ/ಮಗಳಾದ .................ನಾನು ....................ಧರ್ಮದಿಂದ ............................. ಧರ್ಮಕ್ಕೆ ಮತಾಂತರಕ್ಕಾಗಿ ಅಗತ್ಯ ವಿಧಿ ವಿಧಾನಗಳನ್ನು ನಡೆಸುವ ಬಗ್ಗೆ 9ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಮತಾಂತರದ ಮಾಹಿತಿಗಳನ್ನು ಈ ಮೂಲಕ ನೀಡುತ್ತಿದ್ದೇನೆ.

1.ಮತಾಂತರಗೊಂಡ ವ್ಯಕ್ತಿಯ ಹೆಸರು:............................

(1) ಮತಾಂತರಕ್ಕೆ ಮುಂಚಿನ ಹೆಸರು .....................................

(2) ಮತಾಂತರಗೊಂಡ ನಂತರದ ಹೆಸರು (ಹೆಸರು ಬದಲಾವಣೆಯಾಗಿದ್ದರೆ) ......................................

2.(ಎ) ಮತಾಂತರಗೊಂಡ ವ್ಯಕ್ತಿಯ ತಂದೆಯ ಹೆಸರು :.......................

(ಬಿ) ಮತಾಂತರಗೊಂಡ ವ್ಯಕ್ತಿಯ ತಾಯಿಯ ಹೆಸರು:.......................

3. ಮತಾಂತರಗೊಂಡ ವ್ಯಕ್ತಿಯ ವಿಳಾಸ:............................

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........ ತಾಲ್ಲೂಕು: .........

ಜಿಲ್ಲೆ:.......

4.ವಯಸ್ಸು:.........................(ಜನ್ಮ ದಿನಾಂಕ)

5.ಲಿಂಗ:..............................

6.ವೃತ್ತಿ ಮತ್ತು ಮಾಸಿಕ ವರಮಾನ: ........................

7. ವಿವಾಹಿತರೇ ಅಥವಾ ಅವಿವಾಹಿತರೇ: .......................

8. ಮತಾಂತರಗೊಂಡ ವ್ಯಕ್ತಿಯ ಮೇಲೆ ಅವಲಂಭಿತರಾದ ವ್ಯಕ್ತಿ ಯಾರಾದರೂ ಇದ್ದಲ್ಲಿ, ಆ ವ್ಯಕ್ತಿಗಳ ಹೆಸರು: ........................................................

9. ಯಾರಾದರೂ ಅಪ್ರಾಪ್ತರಿದ್ದಲ್ಲಿ, ಪೋಷಕರ ಹೆಸರು ಮತ್ತು ವಿಳಾಸ: ............................

10. ಅನುಸೂಚಿತ ಜಾತಿಗಳು ಮತ್ತು ಪಂಗಡಗಳಿಗೆ ಸೇರಿದವರಾಗಿದ್ದಾರೆಯೇ ಮತ್ತು ಹಾಗಿದ್ದಲ್ಲಿ, ಅಂಥ ಜಾತಿಯ ವಿವರಗಳು: ...........................

11. ಮತಾಂತರದ ವಿಧಿ ವಿಧಾನಗಳನ್ನು ನಡೆಸಲು ಉದ್ದೇಶಿಸಲಾದ ಸ್ಥಳದ ಹೆಸರು ಪೂರ್ಣ ವಿವರಗಳೊಂದಿಗೆ.

ಮನೆ ಸಂಖ್ಯೆ:............ ವಾರ್ಡ್ ಸಂಖ್ಯೆ:..........

ಮೊಹಲ್ಲಾ:...... ಗ್ರಾಮ:........

ಜಿಲ್ಲೆ:.......

12. ಮತಾಂತರದ ದಿನಾಂಕ: ........

13. ಧಾರ್ಮಿಕ ಅರ್ಚಕ:

(i) ಹೆಸರು, ಅರ್ಹತೆ ಮತ್ತು ಅನುಭವ: ................

(ii) ವಿಳಾಸ: ...........................

14. ಮತಾಂತರದ ವಿಧಿ ವಿಧಾನಗಳಲ್ಲಿ ಭಾಗವಹಿಸಿದ ಧಾರ್ಮಿಕ ಅರ್ಚಕರನ್ನು ಹೊರತುಪಡಿಸಿ ಕನಿಷ್ಠ ಇಬ್ಬರು ವ್ಯಕ್ತಿಗಳ ಹೆಸರು. ವಿಳಾಸ ಹಾಗೂ ಇತರೆ ವಿವರಗಳು (ಮತಾಂತರಗೊಂಡ ವ್ಯಕ್ತಿಯೊಂದಿಗಿನ ಸಂಬಂಧ)

(1) .................................

(2) ...............................

**ಸತ್ಯಾಪನೆ**

................ಆದ ನಾನು ಮೇಲೆ ಹೇಳಿದ ಮಾಹಿತಿಯು ನನ್ನ ಉತ್ತಮ ತಿಳಿವಳಿಕೆ ಹಾಗೂ ನಂಬಿಕೆಗೆ ಅನುಸಾರವಾಗಿ ಸತ್ಯವಾಗಿವೆ ಮತ್ತು ಯಾವುದೇ ಅಂಶವನ್ನು ಗುಪ್ತವಾಗಿಟ್ಟಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಹಿ: ........

ಸಾಕ್ಷಿ:(1)........................

ಸಾಕ್ಷಿ:(2)........................

ಸ್ಥಳ: .........

ದಿನಾಂಕ: .........

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಕ್ಕೆ ಮತ್ತು ಭಾರತ ಸಂವಿಧಾನದ ಭಾಗ IIIರ ಇತರ ಉಪಬಂಧಗಳಿಗೆ ಒಳಪಟ್ಟು ಭಾರತ ಸಂವಿಧಾನದ 25ನೇ ಅನುಚ್ಛೇದದ ಅಡಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಖಾತ್ರಿಗೊಳಿಸಲಾಗಿದೆ. ಈ ಖಾತ್ರಿಗೊಳಿಸಲಾದ ಮೂಲಭೂತ ಹಕ್ಕುಗಳ ಕಾರಣದಿಂದಾಗಿ ಎಲ್ಲಾ ವ್ಯಕ್ತಿಗಳು ತಮ್ಮ ಆಯ್ಕೆಯ ಯಾವುದೇ ಧರ್ಮವನ್ನು ಅಂಗೀಕರಿಸಲು, ಆಚರಿಸಲು ಮತ್ತು ಪ್ರಸಾರ ಮಾಡಲು ಮುಕ್ತರಾಗಿರುತ್ತಾರೆ.

ಮತ್ತು ರೆವರೆಂಡ್ ಸ್ಟ್ಯಾನಿಸ್ಲಾಸ್ ವಿರುದ್ಧ ಮಧ್ಯ ಪ್ರದೇಶ ರಾಜ್ಯ ಮತ್ತು ಒರಿಸ್ಸಾ (1977) 1 ಎಸ್ ಸಿಸಿ 677ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು 25ನೇ ಅನುಚ್ಛೇದ ಅಡಿಯಲ್ಲಿನ "ಪ್ರಚಾರ ಮಾಡುವ ಹಕ್ಕು" ಮತ್ತೊಬ್ಬ ವ್ಯಕ್ತಿಯನ್ನು ಮತಾಂತರಗೊಳಿಸುವ ಹಕ್ಕನ್ನು ಒಳಗೊಳ್ಳುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

ಇತ್ತೀಚಿನ ವರ್ಷಗಳಲ್ಲಿ ರಾಜ್ಯವು "ಆಮಿಷ" 'ಒತ್ತಾಯ' 'ಬಲವಂತ' ' ವಂಚನೆ ಸಾಧನಗಳ' ಮೂಲಕ ಮಾಡಲಾದ ಮತಾಂತರ ಹಾಗೂ ಸಾಮೂಹಿಕ ಮತಾಂತರದ ಅನೇಕ ಘಟನೆಗಳನ್ನು ಗಮನಿಸಿದೆ. ಈ ಘಟನೆಗಳು ರಾಜ್ಯದಲ್ಲಿ 'ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿವೆ. ಪ್ರಸ್ತುತ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ಅಂಥ ಘಟನೆಗಳನ್ನು ತಡೆಗಟ್ಟಲು ಮತ್ತು ಅಂಥ ಕೃತ್ಯಗಳಲ್ಲಿ ತೊಡಗಿರುವ ಅಂಥ ವ್ಯಕ್ತಿಗಳನ್ನುಶಿಕ್ಷಿಸಲು ರಾಜ್ಯದಲ್ಲಿ ಯಾವುದೇ ಶಾಸನವು ಅಸ್ತಿತ್ವದಲ್ಲಿರುವುದಿಲ್ಲ.

ಕರ್ನಾಟಕ ಕಾನೂನು ಆಯೋಗವು, ವಿಷಯದ ಕುರಿತು ಹಲವಾರು ಕಾನೂನುಗಳನ್ನು ಅಧ್ಯಯನ ಮಾಡಿದ ತರುವಾಯ ಮತ್ತು ರಾಜ್ಯದಲ್ಲಿನ ಪರಿಸ್ಥಿತಿಯನ್ನು ಪರಿಗಣಿಸಿ ತನ್ನ ಮೂವತ್ತನೇ ವರದಿಯಲ್ಲಿ ವಿಷಯದ ಮೇಲೆ ಸೂಕ್ತ ಕಾನೂನನ್ನು ಅಧಿನಿಯಮಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಆದ್ದರಿಂದ, ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ- 15** | (1)ನೇ ಉಪಖಂಡವು ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರತ್ಯಾಯೋಜಿತ ಶಾಸನಾತ್ಮಕ ಕ್ರಮವು ವಾಡಿಕೆಯ ಸ್ವರೂಪದ್ದಾಗಿದೆ.

**ಆರಗ ಜ್ಞಾನೇಂದ್ರ**
ಗೃಹ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ ಘಟಕ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 500, 20ನೇ ಡಿಸೆಂಬರ್ 2021

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**ELEVENTH SESSION**

# The Karnataka Protection of Right to Freedom of Religion Bill, 2021

**(LA Bill No. 50 of 2021)**

A Bill to provide for protection of right to freedom of religion and prohibition of unlawful conversion from one religion to another by misrepresentation, force, undue influence, coercion, allurement or by any fraudulent means.

Whereas it is expedient to provide for protection of right to freedom of religion and prohibition of unlawful conversion from one religion to another by misrepresentation, force, undue influence, coercion, allurement or by any fraudulent means and for the matters connected therewith or incidental thereto.

Be it enacted by the Karnataka Legislature in the Seventy Second year of Republic of India as follows:-

**1. Short title and commencement.-**(1) This Act may be called the Karnataka Protection of Right to Freedom of Religion Act, 2021.

(2) It shall come into force at once.

**2. Definitions.- (1)** In this Act, unless the context otherwise requires,-

(a) "Allurement" means and includes offer of any temptation in form of ,-

(i) any gift, gratification, easy money or material benefit either in cash or kind;
(ii) employment, free education in school or college run by any religious body; or
(iii) promise to marry; or
(iv) better lifestyle, divine displeasure or otherwise; or
(v) portraying practice, rituals and ceremonies or any integral part of a religion in a detrimental way vis-à-vis another religion ; or
(vi) glorifying one religion against another religion.

(b) "Coercion" means compelling an individual to act against his will by the use of psychological pressure or physical force causing bodily injury or threat thereof;

(c) "Conversion" means renouncing one's own religion and adopting another religion;

(d) "Force" includes a show of force or a threat of injury of any kind to the person converted or sought to be converted or to any other person or property;

(e) "Fraudulent" means and includes impersonation of any kind by false name, surname, religious symbol or otherwise;

(f) "Form" means a form appended to this Act;

(g) "Institutions" means and includes all legal entities, educational institutions, orphanages, old age homes, hospitals, religious missionaries, Non Governmental Organizations, and such other organizations;

(h)"Mass Conversion" means where two or more persons are converted;

(i)"Minor" means a person under eighteen years of age;

(j) "Original Religion" means religion of a person before conversion;

(k)"Religion**"** means any organized system of worship pattern, faith, belief, worship or lifestyle, as prevailing in India or any part of it, and defined under any law or custom for the time being in force;

(l)"Religion Convertor" means a person of any religion who performs any act of conversion from one religion to another religion and by whatever name he is called such as Father, Priest, Purohit, Pandit**,** Moulvi or Mulla etc.,

(m)"Undue Influence" means the unconscientious use by one person of his power or influence over another in order to persuade the other to act in accordance with the will of the person exercising such influence.

(2) Other words and expressions used but not defined in this Act shall have the same meaning as assigned to them in the Karnataka General Clauses Act,1899 (Karnataka Act 03 of 1899).

**3. Prohibition of conversion from one religion to another religion by misrepresentation, force, fraud, undue influence, coercion, allurement or by promise of marriage.-** No person shall convert or attempt to convert, either directly or otherwise, any other person from one religion to another by use or practice of misrepresentation, force, undue influence, coercion, allurement or by any fraudulent means or by any of these means or by promise of marriage, nor shall any person abet or conspire such conversion:

Provided that if any person reconverts to his immediate previous religion the same shall not be deemed to be a conversion under this Act.

**4. Person competent to lodge complaint.-** Any converted person, his parents, brother, sister or any other person who is related to him by blood, marriage or adoption or in any form associated or colleague may lodge a complaint of such conversion which contravenes the provisions of section 3.

**5. Punishment for contravention of provisions of section 3.-** (1) Whoever contravenes the provisions of section 3 shall, without prejudice to any civil liability, be punished with imprisonment of either description for a term of three years but which may extend to five years and shall also be liable to fine of rupees twenty five thousand:

Provided that whoever contravenes the provisions of section 3 in respect of a minor or a person of unsound mind or a woman or a person belonging to the Scheduled Caste or Scheduled Tribe shall be punished with imprisonment of either description for a term of three years but which may extend to ten years and shall also be liable to fine of rupees fifty thousand.

Provided further that whoever contravenes the provisions of section 3 in respect of mass conversion shall be punished with imprisonment of either description for a

term of three years but which may extend to ten years and shall also be liable to fine of rupees one lakh.

(2) The Court shall also grant appropriate compensation payable by the accused to the victim of said conversion which may extend to maximum of rupees five lakh and shall be in addition to fine.

(3) Whoever having been previously convicted of an offence under this Act is again convicted of an offence punishable under this Act, he shall be punished with imprisonment of either description for a term of not less than five years and shall also be liable to a fine of rupees two lakhs.

**6. Marriage done for sole purpose of Unlawful conversion or vice- versa to be declared null and void.**- Any marriage which has happened with sole purpose of unlawful conversion or vice-versa by the man of one religion with the woman of another religion, either by converting himself before or after marriage or by converting the woman before or after marriage, shall be declared as null and void by the Family Court or where the Family Court is not established, the Court having jurisdiction to try such case on a petition presented by either party thereto against the other party of the marriage:

Provided that all the provisions of section 8 and 9 shall apply for such marriages to be solemnized.

**7. Offence to be non-bailable and cognizable.-** Notwithstanding anything contained in the Code of Criminal Procedure, 1973 (Central Act 2 of 1974) every offence committed under this Act shall be cognizable and non-bailable.

**8. Declaration before conversion of religion and pre-report about conversion.-** (1) One who desires to convert his religion, shall give a declaration in Form-I at least thirty days in advance to the District Magistrate or the Additional District Magistrate specially authorized by the District Magistrate in this regard of his residing district or place of birth within the state.

(2) The religious converter who performs conversion ceremony for converting any person of one religion to another religion, shall give thirty days advance notice in Form-II of such intended conversion, to the District Magistrate or the Additional District Magistrate specially authorized by the District Magistrate of the district from where the proposed converter hails.

(3) The District Magistrate, after receiving the information under sub-section (1) and (2) shall notify proposed religious conversion on the notice board of the office of the District Magistrate and in the office of the Tahsildar calling for objections. If any objections are received within thirty days, he shall get an inquiry conducted through officials of Revenue or Social Welfare Department with regard to genuine intention, purpose and cause of the proposed conversion.

(4) If the District Magistrate comes to a conclusion based on the said inquiry of the commission of an offence under this Act, he shall cause the concerned police authorities to initiate criminal action for contravention of the provisions of section 3.

(5) Any conversion in contravention of sub-section (1) or sub-section (2) is illegal and void.

(6) Whoever contravenes the provisions sub-section (1) shall be punished with imprisonment of either description for a term which shall not be less than one year but may extend to three years and shall also be liable to fine which shall not be less than rupees ten thousand.

(7) Whoever contravenes the provisions of sub-section (2) shall be punished with imprisonment of either description for a term which shall not be less than one year, but may extend to five years and shall also be liable to fine which shall not be less than rupees twenty five thousand.

***9.*** **Declaration post conversion of Religion.-**(1) The converted person shall send a declaration in the Form-III within thirty days of the date of conversion, to the District Magistrate of the District or the Additional District Magistrate specially authorized by the District Magistrate in this regard in which he is residing prior to the date of conversion.

(2) The District Magistrate shall notify religious conversion on the notice board of the office of the District Magistrate and in the office of the Tahsildar and will call for objections in such cases where no objections were called earlier under section 8.

(3) The said declaration shall contain the requisite details, i.e; the particulars of the converted person such as date of birth, permanent address, the present place of residence, Father's/husband's name, the religion to which the converted person originally belonged and the religion to which he has converted, the date and place of conversion and nature of process gone through for conversion along with a copy of the identity card or the Aadhar card.

(4) The converted person shall appear before the District Magistrate within twenty one days from the date of sending/filing the declaration to establish his identity and confirm the contents of the declaration.

(5) If any objections are received within thirty days, the District Magistrate shall record the name and particulars of objectors and the nature of objection and shall get an inquiry conducted through officials of Revenue or Social Welfare Department with regard to genuine intention, purpose and cause of the conversion.

(6) If the District Magistrate based on the said inquiry comes to a conclusion of the commission of an offence under this Act, he shall cause the concerned police authorities to initiate criminal action for contravention of the provisions of section 3.

(7) The contravention of the provisions of sub-sections (1) to (4) shall have the effect of rendering the said conversion illegal and void.

(8) If no objections are received for such conversion, the District Magistrate shall record the factum of declaration and confirmation in a register maintained for this purpose. Further District Magistrate shall issue an official notification and shall simultaneously intimate the concerned authority about such conversion.

**Explanation:** For the purpose of this sub-section "Concerned authority" means his employer, officials of the revenue department, social welfare department, backward classes welfare department, minority welfare department and other concerned department, urban and rural local bodies, Principals or Head Masters of the Educational Institutions, etc.

(9) On receipt of such intimation the concerned authority shall cause to be entered in the relevant official records about conversion as well as reclassify the person converted for his entitlement to enjoy social status or to receive economic benefits from the Government that he was getting prior to conversion.

**10. Punishment for Violation of provisions by an institution.-**(1)If any institution violates the provisions of this Act, the person or persons in charge of the affairs of the institution, shall be liable to punishment as provided under section 5.

(2) The State Government shall not provide any financial aid or grant to such institution violating the provisions of this Act.

**11. Parties to Offence.-** If offence is committed under this Act, each of the following shall be deemed to have taken part in committing the offence and shall be guilty of the offence and shall be charged as if he has actually committed the said offence, that is to say,-

(i) every person who actually does the act which constitutes the offence; and

(ii) every person who aids or abets another in committing the offence.

**12. Burden of proof .-** The burden of proof as to whether a religious Conversion was not effected through misrepresentation, force, undue influence, coercion, allurement or by any fraudulent means or by marriage, lies on the person who has caused the conversion and on the abettor who aids or abets such conversion.

**13. Power to amend the Forms.-** The State Government may by notification in the official Gazette, add, alter or omit any of the entries specified in the Forms.

**14. Removal of difficulties.-** (1) If any difficulty arises in giving effect to the provisions of this Act, the State Government may, by a notification or by order, make such provisions, which are not inconsistent with the provisions of this Act, as appear to it to be necessary or expedient, for removing the difficulty:

Provided that, no notification or order under this section shall be made after the expiry of a period of two years from the date of commencement of this Act.

(2) Every Order made under sub-section (1), shall, as soon as may be after it is made, be laid before the State Legislature.

**15. Power to make rules.-** (1) The State Government may make rules by notification, to carry out the purposes of this Act.

(2) Every rule made under this Act shall be laid as soon, as may be after it is made before each House of the State Legislature while it is in session for a total period of thirty days, which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

**FORM-I**

(see sub section(1) of section 8)
(Form of Notice)

Notice regarding intended conversion from one religion to another.

To,
The District Magistrate
District……………
Karnataka.

Sir,

I…………………………………S/o/d/o………………………r/o……………………. do hereby, give notice as required by sub-section (1) of section 8 for intended conversion from ……………………………….. religion to ……………………………….. religion and particulars of aforesaid intended conversion are as below.

1. Name of the person to be converted …………………………………
2. Name of the:
   (a) Father of the person to be converted …………………………………
   (b) Mother of the person to be converted …………………………………
3. Address of the person to be converted …………………………………

   House No ………………. Ward No ……………….

   Mohalla ………………. Village ………………. Taluka ……………….

   District ……………………

4. Age ………………. (DOB)
5. Sex ……………….
6. Occupation and monthly income ……………….
7. Whether married or unmarried ……………….
8. Name or persons, if any, dependent upon the person to be converted ……………………………………………………………………………………………
9. If any minor, name and full address of the guardian if any ……………………………………………………………………………………………
10. Whether belong to Scheduled Castes or Scheduled Tribes and if so, particulars of such caste…………………………………………………………………… …… ……
11. Name of the place where the conversion ceremony is intended to take place with full details.
    House No ………………. Ward No ……………….
    Mohalla ………………. Village ……………….
    District ……………………
12. Date for Conversion ……………….

13. Religious priest:
    (i) Name, Qualification and experience………………..
    (ii) Address ……………………….

**VERIFICATION**

I, ………………. do hereby declare that the information stated above is true to the best of my knowledge and belief and nothing has been concealed.

Signature………………..
Date ……………….
Place ………………..

**FORM-II**
(see sub-section(2) of section 8)
(Form of declaration)

Intimation regarding intended conversion from one religion to another.

To,

The District Magistrate
District……………
Karnataka.

Sir,

I…………………………………S/o/d/o……………………….r/o……………………. intend to perform necessary ceremony for conversion from ………………………………… religion to ………………………………. religion, do hereby, give intimation of intended conversion as required by sub-section (2) of section 8:

1. Name of the person to be converted …………………………………
2. Name of the:
   (a) Father of the person to be converted …………………………………
   (b) Mother of the person to be converted …………………………………
3. Address of the person to be converted …………………………………

   House No ………………. Ward No ……………….

   Mohalla ………………. Village ………………. Taluka ……………….

   District ……………………

4. Age ………………. (DOB)
5. Sex ……………….
6. Occupation and monthly income ……………….
7. Whether married or unmarried ……………….
8. Name or persons, if any, dependent upon the person to be converted ……………………………………………………………………………………………
9. If any minor, name and full address of the guardian if any ……………………………………………………………………………………………

10. Whether belong to Scheduled Castes or Scheduled Tribes and if so, particulars of such caste……………………………………………………………………… …… ……
11. Name of the place where the conversion ceremony is intended to take place with full details.
    House No ………………. Ward No ……………….
    Mohalla ………………. Village ……………….
    District ……………………
12. Date for Conversion ……………….
13. Religious priest:
    (iii) Name, Qualification and experience……………….
    (iv) Address ……………………….

**VERIFICATION**

I, ………………. do hereby declare that the information stated above is true to the best of my knowledge and belief and nothing has been concealed.

Signature……………….
Date ……………….
Place ……………….

**FORM-III**

(see sub-section (1) of section 9)
(Form of declaration)
Intimation regarding conversion from one religion to another

To,
The District Magistrate
District……………………….
Karnataka.

Sir,

I ………………………… S/o/d/o/………………. r/o ……………….having undergone the necessary ceremony for conversion from ………………… religion to …………………… religion, do hereby, give intimation of the conversion as required by section 9 as under:

1. Full Name of person converted:
   (1) Before conversion……………………….
   (2) After conversion (if the name is changed)……………….
2. Name of the:
   (a) Father of the person converted …………………………….
   (b) Mother of the person converted…………………………….
3. Address of the person converted

House No………Ward No……………………Mohalla……………….

Village………………………. Taluka……………………District…………….

4. Age…………………………..(DOB)
5. Sex…………………………….
6. Occupation and monthly income…………….
7. Whether married or unmarried……………………….
8. Name of persons, if any, dependent upon the person converted……………
9. If a minor, name and full address of the guardian, if any………………….
10. Whether belongs to Scheduled Caste or Scheduled Tribe and if so, particulars of such Caste……………..
11. Name of the place where the conversion ceremony has taken place with full details

    House No…………………. Ward No………….. Mohalla……………………

    Village …………………………………… District…………………….
12. Date of conversion………………….
13. Religious priest:
    (i) Name, qualification and experience………….
    (ii) Address…………………………………………….
14. Names, address and other particulars (relationship with the person converted, if any) of at least two persons other than religious priest who had taken part in the conversion ceremony

    (1)……………………………………

    (2)……………………………………

**VERIFICATION**

I, ……………………..do hereby declare that the information stated above is true to the best of my knowledge and belief nothing has been concealed.

Signature…………………….

Witness: (1)…………………..

Witness: (2)…………………..

Date……………………

Place…………………..

## STATEMENT OF OBJECTS AND REASONS

Right to freedom of Religion is guaranteed under Article 25 of the Constitution of India, subject to public order, morality and health and to the other provisions of part III of the Constitution of India. By virtue of these guaranteed fundamental rights all persons are free to profess, practice and propagate any religion of their choice.

Further, in Rev. Stanislaus V/s State of Madhya Pradesh and Orissa (1977) 1 SCC 677, the Hon'ble Supreme Court has held that "right to propagate" under Article 25 does not include the right to convert another person.

In recent years the State has noticed many instants of conversion by means of 'allurement','coercion','force', fraudulent means" and also 'mass' conversion. These instances caused disturbance of 'public order' in the State. At present no legislation is in existence in the State to prevent such instances which cause disturbance to public order and to punish such persons indulged in such acts.

The Law Commission of Karnataka after studying the various laws on the subject and considering the situation in the State in its Thirtieth report has made recommendation to the Government to enact a suitable law on the subject:

Hence this Bill.

**FINANCIAL MEMORANDUM**

There is no extra expenditure involved in the proposed legislative measure .

**MEMORANDUM REGARDING DELEGATED LEGISLATION**

| | |
|---|---|
| Clause-15 | Sub-clause (1) empowers the State Government to make rules to carry out the purposes of the Act. |

The proposed delegation of legislative power is normal in character.

**ARAGA JNANENDRA**
Minister for Home

**M.K. VISHALAKSHI**
Secretary (I/c)
Karnataka Legislative Assembly

Govt. Press, Suvarna Vidhana Soudha, Belagavi, 20th December, 2021, P7, W.D. , Copies 500